2	ವಾಸೇತರ ಕಟ್ಟಡಗಳು, ಸಾಮಾಜಿಕ ಕ್ರೀಡಾ ಕಟ್ಟಡಗಳು	0 4%	0 4%
3	ವಾಸೇತರ ವಾಣಿಜ್ಯ ಕಟ್ಟಡಗಳು	0 5%	0 9%
4	ಚಿತ್ರಮಂದಿರ, ಕಲ್ಯಾಣ ಮಂಟಪ, ಸಮುದಾಯ ಭವನ, ಹೋಟೆಲ್ ಕಟ್ಟಡಗಳು, ಇತ್ಯಾದಿ	0 6%	1 5%
5	ಖಾಲಿ ನಿವೇಶನ	0 01% ರಿಂದ 0 1%	0 02% ರಿಂದ 0 15%

ಇ) ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ 1976ರ ಕಾಯ್ದೆ 109ರಂತೆ ಪ್ರತಿ ಮೂರು ವರ್ಷಕ್ಕೊಮ್ಮೆ ಶೇಕಡಾ 30 ರಷ್ಟು ಆಸ್ತಿ ತೆರಿಗೆಯನ್ನು ಹೆಚ್ಚಿಸಬೇಕಾಗಿರುತ್ತದೆ ಹಾಗೂ ಈ ರೀತಿ ಹೆಚ್ಚಿನಲಾದ ಆಸ್ತಿ ತೆರಿಗೆಯನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ ಕಲಂ 45ಬಿ ಅಡಿ ನಿಗದಿಪಡಿಸಲಾಗಿರುವ ಸ್ಥಿರ ಆಸ್ತಿ ಮೌಲ್ಯವನ್ನು ಮಾನದಂಡವಾಗಿ ಇಟ್ಟುಕೊಂಡು ಆಸ್ತಿ ತೆರಿಗೆಯನ್ನು ಹೆಚ್ಚಿಸಲಾಗಿದೆ ಈ ಪರಿಷ್ಕರಣೆಯನ್ನು $1^{3}/_{4}$ ವರ್ಷ ವಿಳಂಬವಾಗಿ ಜಾರಿಗೊಳಿಸಲಾಗುತ್ತಿದೆ ನಗರದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ನಂಪನ್ಮೂಲ ಕ್ರೋಢೀಕರಿಸುವ ಉದ್ದೇಶದಿಂದ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲಾಗಿದೆ

ಈ) ವೈಜ್ಞಾನಿಕವಾಗಿಯೇ ಹೆಚ್ಚಿಸಿರುವುದರಿಂದ ಹಿಂತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

956 (1208) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಮೈಸೂರು ನಗರದಲ್ಲಿ ಜವಾಹರಲಾಲ್ ನೆಹರು ನಗರ ಪುನರ್‌ಜ್ಜೀವನ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾರ್ಯಗಳೆಷ್ಟು,

ಆ) ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಜವಾಬ್ದಾರಿ ವಹಿಸಿರುವ ಸಂಸ್ಥೆ/ಕಛೇರಿ ಯಾವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಜೆ ಎನ್ ಎನ್ ಯು ಆರ್ ಎಂ ಯೋಜನೆಯಡಿಯಲ್ಲಿ ಮೈಸೂರು ನಗರದ ಅಭಿವೃದ್ಧಿಗ ಮೂರು ಯೋಜನಾ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಕೆಳಕಂಡ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆ

1 20 ಕೊಳಚೆ ಪ್ರದೇಶಗಳಲ್ಲಿ ಪುನರ್ ವಸತಿ ಕಲ್ಪಿಸುವುದು

2 ಹಾಲಿ ಇರುವ ನೀರಿನ ವಿತರಣಾ ವ್ಯವಸ್ಥೆಯ ಸುಧಾರಣೆ

ಆ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಮತ್ತು ಕರ್ನಾಟಕ ನಗರ ನೀರು ನರಬರಾಜು ಒಳಚರಂಡಿ ಮಂಡಳಿಗಳು ಮೇಲೆ ತಿಳಿಸಿದ ಯೋಜನೆಗಳನ್ನು ಮೈಸೂರು ಮಹಾನಗರ ಪಾಲಿಕೆಯ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸುತ್ತವೆ

957 (1261) ಡಾ ಶರಣಪ್ರಕಾಶ ರುದ್ರಪ್ಪ ಪಾಟೀಲ (ಸೇಡಂ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

a) The Proposal of Roads for upgradation from Major District Roads to State Highway at Sedam Taluk are pending in the Government,

b) When is the Government going to take action to upgrade them?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮತ್ತು ಆ) ಹೌದು ಸರ್ಕಾರದ ಪರಿಶೀಲನೆಯಲ್ಲಿದೆ

958 (1262) ಡಾ ಶರಣಪ್ರಕಾಶ ರುದ್ರಪ್ಪ ಪಾಟೀಲ (ಸೇಡಂ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

a) The proposal of Roads for upgradation from village road to Major district road in Sadam Taluk are pending in the Government,

b) When is the Government going to take action to upgrade them?